C.R.P.67
Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ ಃ 39/2021

ದಿನಾಂಕಃ 26.06.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ
ಸಿ. ಡಬ್ಲ್ಯೂ :7 ಪಿ. ಡಬ್ಲ್ಯೂ :9

| | |
|---|---|
| ಸಾಕ್ಷಿದಾರರ ಹೆಸರು | ಚಿಕ್ಕಪುಟ್ಟ |
| ತಂದೆಯ ಹೆಸರು | ಲೇಟ್ ಚಿಕ್ಕಣ್ಣ |
| ವಯಸ್ಸು | 40 ವರ್ಷ |
| ಉದ್ಯೋಗ | ಗಾರೆ ಕೆಲಸ |
| ವಾಸ | ಮರೀಗೌಡ ಬಡಾವಣೆ, ಮಂಡ್ಯ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1) ಚಾಸಾ 1, ಚಾಸಾ 2 ಮತ್ತು ಚಾಸಾ 6 ರವರು ಗೊತ್ತು. ಇವರು ನನಗೆ ಸಂಬಂಧಿಕಾರಗಬೇಕು. ಚಾಸಾ 3 ರಿಂದ 5 ರವರು ಗೊತ್ತು. ಇವರುಗಳು ನಮ್ಮ ಪಕ್ಕದ ಊರಿನವರು. ನ್ಯಾಯಾಲಯದ ಮುಂದೆ ಇರುವ 1, 2, 4, 5, 6 ಮತ್ತು 7 ನೇ ಆರೋಪಿತರು ಗೊತ್ತು. ನನ್ನ ಆಸ್ತಿ, ಆರೋಪಿತರ ಆಸ್ತಿಗಳು ಹಾಗೂ ಚಾಸಾ 1, 2 ಮತ್ತು ಚಾಸಾ 6 ರವರ ಆಸ್ತಿಗಳು ಕ್ಯಾತುಂಗೆರೆ, ಅನ್ನಪೂರ್ಣೇಶ್ವರಿ ನಗರದಲ್ಲಿ ಇವೆ. ನಾನು ಮೇಲೆ ಹೇಳಿದ ವಿಳಾಸ ಮರೀಗೌಡ ಬಡಾವಣೆಯಲ್ಲಿ ಹುಟ್ಟಿದಾನಿಂದಲೂ ವಾಸವಾಗಿದ್ದೇನೆ. ಚಾಸಾ 1, ಚಾಸಾ 2 ಮತ್ತು ಆರೋಪಿತರಗಳು ಮನೆಗಳು ಮರೀಗೌಡ ಬಡಾವಣೆಯ 2 ಕ್ರಾಸ್ ನಲ್ಲಿ ಇದೆ. ನಮ್ಮ ಮನೆಯಿಂದ, ಆರೋಪಿತರು ಹಾಗೂ ಚಾಸಾ 1, 2 ಮತ್ತ 6 ರವರು ವಾಸವಾಗಿರುವ ಮನೆಗೆ ಕಾಲು ಕಿಮೀ ಇದೆ.

2) ಚಾಸಾ 2 ರವರು ವ್ಯವಸಾಯ ಮಾಡುತ್ತಾರೆ. ಚಾಸಾ 2 ರವರು ನನ್ನ ಸಂಬಂಧಿ. ಆಸ್ತಿ ವಿಚಾರಕ್ಕೆ ಸಂಬಂಧಪಟ್ಟಂತೆ ಗಲಾಟೆಯಾಗಿತ್ತು. ದಿಃ 30.09.2020 ರಲ್ಲಿ ಗಲಾಟೆಯಾಗಿತ್ತು. ಗಲಾಟೆಯು ಮರೀಗೌಡ ಬಡಾವಣೆಯ 2 ಕ್ರಾಸ್ ನಲ್ಲಿ ಆರೋಪಿತರ ಮನೆಯ ಹತ್ತಿರ ಆಗಿತ್ತು. ನನಗೆ ಬೆ. 9.15 ರಲ್ಲಿ ನನಗೆ ಯಾರೋ ನನಗೆ ಫೋನ್ ಮಾಡಿ ಗಲಾಟೆಯಾಗುತ್ತಿದೆ ಹೋಗಿ ಎಂದು ತಿಳಿಸಿದರು. ನಾನು ಬೈಕ್‌ನಲ್ಲಿ ಆರೋಪಿತರ ಮನೆಯ ಹತ್ತಿರ ಹೋಗುತ್ತಿದ್ದೆ, ಆಗ ಯಾರೋ ಮದ್ಯದಲ್ಲಿ ಸಿಕ್ಕಿ, ಆಟೋದಲ್ಲಿ ಚಾಸಾ 2 ರವರನ್ನು ಹಾಕಿಕೊಂಡು ಆಸ್ಪತ್ರೆಗೆ ಹೋದರು

ಎಂದು ಹೇಳಿದರು. ನಂತರ ನಾನು ಬೆ. 9.45 ರಿಂದ 10.00 ಗಂಟೆಗೆ ಆಸ್ಪತ್ರೆಗೆ ಹೋದೆನು. ಮಂಡ್ಯದ ಜಿಲ್ಲಾ ಆಸ್ಪತ್ರೆಯಲ್ಲಿ ಚಾಸಾ 3, ಚಾಸಾ 4 ಮತ್ತು ಚಾಸಾ 5 ರವರು ಇದ್ದರು. ಚಾಸಾ 2 ರವರು ಬೆಡ್ ಮೇಲೆ ಮಲಗಿದ್ದರು. ವೈದ್ಯರು ಅವರನ್ನು ಪರೀಕ್ಷಿಸುತ್ತಿದ್ದರು. ಚಾಸಾ 1 ರವರು ಪಕ್ಕದ ಬೆಡ್ ನಲ್ಲಿ ಇದ್ದರು. ನಾನು ನೋಡಿದಾಗ ಚಾಸಾ 2 ರವರ ತಲೆ, ಮುಖಕ್ಕೆ, ಗಲ್ಲಕ್ಕೆ, ಬಲ ಕಣ್ಣಿನ ಮೇಲ್ಭಾಗದ ಹುಬ್ಬಿಗೆ ಏಟಾಗಿತ್ತು. ನಂತರ ವೈದ್ಯರು ಆ್ಯಂಬುಲೆನ್ ನಲ್ಲಿ ಚಾಸಾ 2 ರವರನ್ನು ಬೆಂಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದರು. ಚಾಸಾ 2 ರವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ, ನಾನು ಮತ್ತು ಚಾಸಾ 6 ರವರು ಕರೆದುಕೊಂಡು ಹೋದೆವು. ನಾನು ರಾತ್ರಿ ಅಲ್ಲೇ ಖಾಸಗಿ ಆಸ್ಪತ್ರೆಯಲ್ಲಿ ಇದ್ದುಕೊಂಡು ಮರುದಿನ ಬೆಳಿಗ್ಗೆ ವಾಪಸ್ ಮಂಡ್ಯಕ್ಕೆ ಬಂದೆನು. ಚಾಸಾ 2 ರವರು ಖಾಸಗಿ ಆಸ್ಪತ್ರೆಯಲ್ಲಿ ಸುಮಾರು 1 ವರೆ ತಿಂಗಳು ಇದ್ದರು.

3) ಚಾಸಾ 2 ರವರಿಗೆ ತಲೆಯ ಮೇಲೆ ಕಲ್ಲನ್ನು ಎತ್ತಿ ಹಾಕಿ, ದಡಿ(ದೊಣ್ಣೆ)ಯಲ್ಲಿ ಹೊಡೆದಿದ್ದರು. ಆರೋಪಿತರು ಮತ್ತು ಚಾಸಾ 2 ರವರು ವಾಸ ಇದ್ದ ಜೋಡಿ ಮನೆಯ ಆರ್ ಸಿ ಸಿ ಮನೆಯ ಮೇಲಿಂದ 1 ನೇ ಆರೋಪಿ ಶಂಕರ ಕಲ್ಲನ್ನು ಎತ್ತಿ ಹಾಕಿದ ವಿಚಾರವನ್ನು ನನಗೆ ಚಾಸಾ 1 ರವರು ತಿಳಿಸಿದರು. ದಡಿಯಿಂದ, ಎಲ್ಲಾ ಆರೋಪಿತರು ಸೇರಿ ಚಾಸಾ 2 ರವರಿಗೆ ಹೊಡೆದಿದ್ದರು ಎಂದು ಚಾಸಾ 1 ರವರು ನನಗೆ ತಿಳಿಸಿದ್ದರು. ಘಟನೆಯಾದ ದಿನ ಚಾಸಾ 2 ರವರ ಮನೆಯಲ್ಲಿ ಯಾರು ಯಾರು ಇದ್ದರು ಎಂದರೆ ಚಾಸಾ 2 ಮತ್ತು ಅವರ ಮಗ ಇದ್ದರಂತೆ. ಚಾಸಾ 2 ರವರ ಹೆಂಡತಿಯಾದ ಚಾಸಾ 6 ರವರು, ಅವರ ದೊಡ್ಡಮ್ಮನ ಮನೆಗೆ ಹೋಗಿದ್ದರಂತೆ. ಗಲಾಟೆ ಆಗುವುದಕ್ಕಿಂತ ಮುಂಚೆ, 2 ದಿನಗಳ ಹಿಂದೆ ಚಾಸಾ 2 ರವರು ನನಗೆ ಜಮೀನು ಹತ್ತಿರ ಸಿಕ್ಕಿದ್ದರು. ಆಗ ಚಾಸಾ 2 ರವರು ನನ್ನ ಬಳಿ, ಜಮೀನಿನ ವಿಚಾರದಲ್ಲಿ ಕೇಸು ನಡೆಯುತ್ತಿರುವುದರಿಂದ ಗಲಾಟೆ ಆಗುತ್ತದೆ, ಸಂಚು ನಡೆಯುತ್ತಿದೆ ಎಂದು ಎಂದು ಹೇಳಿದಾಗ ನಾನು ಅವರಿಗೆ, ಸ್ವಲ್ಪ ಉಷಾರಾಗಿರಿ ಕೇಸು ಮುಗಿಯುವರಿಗೆ ಎಂದು ತಿಳಿಸಿದೆನು.

4) ಈ ಗಲಾಟೆಗೆ ಸಂಬಂಧಪಟ್ಟಂತೆ ಪೊಲೀಸ್ ಠಾಣೆಗೆ ಹೋಗಿದ್ದೆ. ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ, ಗಲಾಟೆಯ ಬಗ್ಗೆ ನನ್ನನ್ನು ವಿಚಾರಿಸಿದರು. ನಾನು ಚಾಸಾ 2 ರವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದನ್ನು ಹೇಳಿದ್ದೆನು.

<u>ಪಾಟೀ ಸವಾಲುಃ ಆರೋಪಿತರ ಪರ ಕಿರಿಯ ವಕೀಲರು ಹಿರಿಯ ವಕೀಲರ ಪರವಾಗಿ ಸಮಯವನ್ನು ಕೋರಿರುತ್ತಾರೆ, ಯಾವುದೇ ಸಕಾರಣವನ್ನು ನೀಡಿರುವುದಿಲ್ಲ, ಆದ್ದರಿಂದ ಅವರ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>

<u>ಮರು ವಿಚಾರಣೆಃ</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.